## ೧೪.೦೬.೨೦೧೩ರಂದು ನಡೆದ ಪ್ರಶಿಕ್ಷಣ ಪರಿಷತ್ತಿನ ೮ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ೮ನೇ ಸಭೆಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಜೂನ್ ೧೪, ೨೦೧೩ರ ಶುಕ್ರವಾರ ಬೆಳಿಗ್ಗೆ ೦೮.೩೦ ಗಂಟೆಗೆ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಡಾ. ಬಿ.ಎಸ್. ಮಹದೇವಯ್ಯ,** ಶಿವಮೊಗ್ಗ | ಸದಸ್ಯರು |
| ೩. | **ವಿದ್ವಾನ್ ಚಂದ್ರಶೇಖರಯ್ಯ,** ರಾಮನಗರ | ಸದಸ್ಯರು |
| ೪. | **ಡಾ. ಪದ್ಮಾಶೇಖರ್,** ಮೈಸೂರು | ಸದಸ್ಯರು |
| ೫. | **ಡಾ. ಭಗವಂತ ಲಕ್ಷ್ಮಣ ನಡೋಣಿ,** ಧಾರವಾಡ | ಸದಸ್ಯರು |
| ೬. | **ಡಾ. ಸಿ. ಪಾಲಯ್ಯ,** ಚಿತ್ರದುರ್ಗ | ಸದಸ್ಯರು |
| ೭. | **ಡಾ. ಭಾಷ್ಯಂಸ್ವಾಮಿ,** ಮೈಸೂರು | ಸದಸ್ಯರು |
| ೮. | **ವಿದ್ವಾನ್ ನರಸಿಂಹ ಭಟ್,** ಸೋಂದಾ | ಸದಸ್ಯರು |
| ೯. | **ವಿದ್ವಾನ್ ರಾಮಚಂದ್ರ ನಾ. ಭಟ್ಟ,** ಉಮ್ಮಚಗಿ | ಸದಸ್ಯರು |
| ೧೦. | **ವಿದ್ವಾನ್ ಶ್ರೀಧರಶಾಸ್ತ್ರಿ ಇನಾಮದಾರ್,** ಧಾರವಾಡ | ಸದಸ್ಯರು |
| ೧೧. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೧೨. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ವಿದ್ವಾನ್ ಗಜಾನನ ಲಕ್ಷ್ಮೀನಾರಾಯಣ ಭಟ್ಟ,** ಉಮ್ಮಚಗಿ | ಸದಸ್ಯರು |
| ೭. | **ಪ್ರೊ. ಬಿ. ಮಹಾದೇವನ್,** ಬೆಂಗಳೂರು | ಸದಸ್ಯರು |
| ೮. | **ವಿದ್ವಾನ್ ಶ್ರೀನಿವಾಸಮೂರ್ತಿ,** ಮೈಸೂರು | ಸದಸ್ಯರು |

ಸಭೆಯ ಆರಂಭಕ್ಕೆ ಮುನ್ನ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಅನಂತರ ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಿಕ್ಷಣ ಪರಿಷತ್ ಏಳನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 27.04.2013ರಂದು ನಡೆದ ವಿಶ್ವವಿದ್ಯಾಲಯದ ಪ್ರಶಿಕ್ಷಣ ಪರಿಷತ್ತಿನ ಏಳನೇ ಸಭೆಯಲ್ಲಿ ಚರ್ಚಿತವಾದ **ವಿಷಯ ಸಂಖ್ಯೆ 7 ಮತು 8ಕ್ಕೆ** ಸಂಬಂಧಿಸಿದಂತೆ ಕ್ರಮವಹಿಸಲಾಗುತ್ತಿದೆ. **ವಿಷಯ ಸಂಖ್ಯೆ 11, 12, 13ಕ್ಕೆ** ಸಂಬಂಧಿಸಿದಂತೆ ನೂತನ ಪಠ್ಯಕ್ರಮವನ್ನು ಅನುಷ್ಠಾನಕ್ಕೆ ತರಲು ಕ್ರಮವಹಿಸಲಾಗುತ್ತಿದೆ. **ವಿಷಯ ಸಂಖ್ಯೆ 15ಕ್ಕೆ** ಸಂಬಂಧಿಸಿದಂತೆ 2013–14ನೇ ಸಾಲಿನ 'ಅಧ್ಯಯನ ಮಂಡಳಿ'ಯನ್ನು ರಚಿಸಲು ಕ್ರಮಕೈಗೊಳ್ಳಲಾಗುತ್ತಿದೆ.

ನಿರ್ಣಯ: **ಸಭೆಯು ಅನುಪಾಲನಾ ವಿವರಗಳನ್ನು ಪರಿಶೀಲಿಸಿ ಅನುಮೋದಿಸಿತು.**

**ವಿಷಯ 2: ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಿ.ಲಿಟ್ ಪ್ರದಾನ ಮಾಡುವುದರ ಬಗೆಗೆ.**

ಟಿಪ್ಪಣಿ: ಮಾನ್ಯ ಕುಲಾಧಿಪತಿಗಳ ಅನುಮೋದನೆಯಂತೆ ಈ ಕೆಳಕಂಡ ನಾಲ್ವರು ವಿದ್ವಾಂಸರಿಗೆ ವಿಶ್ವವಿದ್ಯಾಲಯದ ಡಿ.ಲಿಟ್ ಗೌರವ ಉಪಾಧಿಯನ್ನು ನೀಡಲಾಗುತ್ತಿದೆ.

1. ಪಂಡಿತ್ ಭಾಲಚಂದ್ರಶಾಸ್ತ್ರೀ ನಾಗೇಶಶಾಸ್ತ್ರೀ ಉಪ್ಪಿನ ಬೆಟಗೇರಿ ಜೋಶಿ, ಧಾರವಾಡ ಜಿಲ್ಲೆ (ನವೀನನ್ಯಾಯ)
2. ವಿದ್ವಾನ್ ಕೆ.ಎಸ್. ವರದಾಚಾರ್ಯ, ಮೈಸೂರು ಜಿಲ್ಲೆ (ವಿಶಿಷ್ಟಾದ್ವೈತವೇದಾಂತ)

3. ವಿದ್ವಾನ್ ಕೆ. ನಾರಾಯಣಶಾಸ್ತ್ರಿ ಬುಚ್ಚನ್, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ (ವೇದ, ಮೀಮಾಂಸಾ ಶಾಸ್ತ್ರ)
4. ಡಾ. ಎಂ. ಶಿವಕುಮಾರಸ್ವಾಮಿ, ಬೆಂಗಳೂರು ಜಿಲ್ಲೆ (ಶಕ್ತಿವಿಶಿಷ್ಟಾದ್ವೈತವೇದಾಂತ)

ನಿರ್ಣಯ: **ಸಭೆಯು ನಾಲ್ವರು ಹಿರಿಯ ವಿದ್ವಾಂಸರಿಗೆ ಘನತೆವೆತ್ತ ಕುಲಾಧಿಪತಿಗಳ ಅನುಮೋದನೆಯ ಮೇರೆಗೆ ಗೌರವ ಡಿ.ಲಿಟ್ ಪ್ರದಾನ ಮಾಡಲು ಸಂತಸ ವ್ಯಕ್ತಪಡಿಸಿತು.**

**ವಿಷಯ 3: 2011–12ನೇ ಸಾಲಿನಲ್ಲಿ ನಡೆದ ಸ್ನಾತಕ–ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಬಿ.ಎ. ವಿದ್ವನ್ಮಧ್ಯಮಾ ಹಾಗೂ ಎಂ.ಎ. ವಿದ್ವದುತ್ತಮಾ ಉಪಾಧಿಗಳನ್ನು ಪ್ರದಾನ ಮಾಡುವ ಬಗೆಗೆ.**

ಟಿಪ್ಪಣಿ: ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯವು 2011–12ನೇ ಸಾಲಿನಲ್ಲಿ ನಡೆಸಿದ ಸಂಸ್ಕೃತ/ವೇದ ಸ್ನಾತಕ–ಸ್ನಾತಕೋತ್ತರ ಪ್ರಸಿದ್ಧ ಪರೀಕ್ಷೆಗಳಲ್ಲಿ ಉತ್ತೀರ್ಣರಾದ **249 ವಿದ್ಯಾರ್ಥಿಗಳಿಗೆ ಬಿ.ಎ. ವಿದ್ವನ್ಮಧ್ಯಮಾ** ಹಾಗೂ **166 ವಿದ್ಯಾರ್ಥಿಗಳಿಗೆ ಎಂ.ಎ. ವಿದ್ವದುತ್ತಮಾ** ಉಪಾಧಿಯನ್ನು ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭದಲ್ಲಿ ಪ್ರದಾನ ಮಾಡಲಾಗುತ್ತಿದೆ.

ನಿರ್ಣಯ: **ಸಭೆಯು ೨೦೧೧–೧೨ನೇ ಸಾಲಿನಲ್ಲಿ ಬಿ.ಎ. ವಿದ್ವನ್ಮಧ್ಯಮಾ ಮತ್ತು ಎಂ.ಎ. ವಿದ್ವದುತ್ತಮಾ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಉಪಾಧಿಗಳನ್ನು ಪ್ರದಾನ ಮಾಡಲು ಅನುಮೋದನೆಯನ್ನು ನೀಡಿತು.**

**ವಿಷಯ 4: ಆಯಾ ಶಾಸ್ತ್ರಭಾಗಗಳಲ್ಲಿ ಅತಿಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರ ನೀಡುವ ಬಗೆಗೆ.**

ಟಿಪ್ಪಣಿ: 2011–12ನೇ ಸಾಲಿನಲ್ಲಿ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟ ಶ್ರೇಣಿ ಪಡೆದು ಉತ್ತೀರ್ಣರಾದ ಒಂಭತ್ತು (9) ವಿದ್ಯಾರ್ಥಿಗಳಿಗೆ ರೂ. 5000/– ನಗದು ಪುರಸ್ಕಾರ ಮತ್ತು ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರವನ್ನು ನೀಡಲಾಗುತ್ತಿದೆ. ಹನ್ನೆರಡು ಮಂದಿ ವಿದ್ಯಾರ್ಥಿಗಳು ಮತ್ತು ಶಾಸ್ತ್ರಭಾಗಗಳ ವಿವರ ಕೆಳಗಿನಂತಿದೆ:

| | | | |
|---|---|---|---|
| 1. | ಗೌರಿ ಹೆಗಡೆ | ಅಲಂಕಾರ | ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ |
| 2. | ನಾಗೇಂದ್ರ ಪವನ ಆರ್.ಎನ್. | ವ್ಯಾಕರಣ | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು |
| 3. | ಭೀಮಸೇನ ಗೋಪಾಲಾಚಾರ್ ಗುತ್ತಲ್ | ನವೀನನ್ಯಾಯ | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು |
| 4. | ಶ್ರೀ ಕೃಷ್ಣ ಭಟ್ | ಪೂರ್ವಮೀಮಾಂಸಾ | ಶ್ರೀಮನ್ಮಹಾರಾಜ ಸಂಸ್ಕೃತ ಕಾಲೇಜು, ಮೈಸೂರು |
| 5. | ಬಾಲಚಂದ್ರ ಡಿ. | ದ್ವೈತವೇದಾಂತ | ಪೂರ್ಣಪ್ರಜ್ಞ ವಿದ್ಯಾಪೀಠ ಸಂಸ್ಕೃತ ಕಾಲೇಜು, ಬೆಂಗಳೂರು |
| 6. | ನವೀನ್ ಭಟ್ ಎಸ್. | ಅದ್ವೈತವೇದಾಂತ | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು |
| 7. | ವಿಜಯಾನಂದ ಅಡಿಗ ಬಿ. | ಜ್ಯೋತಿಷ್ಯ | ಎಸ್.ಎಂ.ಎಸ್.ಪಿ. ಸಂಸ್ಕೃತ ಕಾಲೇಜು, ಉಡುಪಿ |
| 8. | ಮಹೇಶ ಜಿ. ಭಟ್ | ಕೃಷ್ಣಯಜುರ್ವೇದ | ಶ್ರೀ ರಾಜರಾಜೇಶ್ವರಿ ಸಂಸ್ಕೃತ ಕಾಲೇಜು, ಸೋಂದಾ |
| 9. | ರಘುರಾಮ ಎಂ.ವಿ. | ಸಾಮವೇದ | ಶ್ರೀ ಚಾಮರಾಜೇಂದ್ರ ಸಂಸ್ಕೃತ ಕಾಲೇಜು, ಬೆಂಗಳೂರು |

ನಿರ್ಣಯ: **ಸಭೆಯು ೨೦೧೧–೧೨ನೇ ಸಾಲಿನಲ್ಲಿ ವಿವಿಧ ಶಾಸ್ತ್ರಗಳಲ್ಲಿ ವಿಶಿಷ್ಟ ಶ್ರೇಣಿ ಪಡೆದು ಉತ್ತೀರ್ಣರಾದ ಒಂಭತ್ತು ವಿದ್ಯಾರ್ಥಿಗಳಿಗೆ ರೂ. ೫೦೦೦/– ನಗದು ಪುರಸ್ಕಾರ ಮತ್ತು ಸರ್ವೋತ್ಕೃಷ್ಟಶ್ರೇಣಿ ಪ್ರಮಾಣಪತ್ರ ನೀಡಲು ಅನುಮೋದನೆಯನ್ನು ನೀಡಿತು.**

**ವಿಷಯ 2: 2013–14ನೇ ಸಾಲಿನಲ್ಲಿ ಹೊಸದಾಗಿ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಿರುವುದಕ್ಕೆ ಘಟನೋತ್ತರ ಅನುಮೋದನೆ ನೀಡುವ ಬಗೆಗೆ.**

ಟಿಪ್ಪಣಿ: 2013–14ನೇ ಸಾಲಿನಲ್ಲಿ ಸಂಸ್ಕೃತ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡುವಂತೆ ಜೆ.ಎಸ್.ಎಸ್. ಮಹಾವಿದ್ಯಾಪೀಠ (ರಿ.), ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ರಾಮಾನುಜ ರಸ್ತೆ, ಮೈಸೂರು ಮತ್ತು ಶ್ರೀ ಸಿದ್ಧೇಶ್ವರ ವಿದ್ಯಾಸಂಸ್ಥೆ, ಸಿದ್ದಾಪುರ, ಬಂಡಿಮೋಟ್, ಬಳ್ಳಾರಿ ಸಂಸ್ಥೆಗಳು ಆವೇದನಪತ್ರಗಳನ್ನು ಸಲ್ಲಿಸಿದ್ದವು. ಅವುಗಳನ್ನು ಪರಿಶೀಲಿಸಿ ಅನುಮತಿ ನೀಡುವ ನಿಮಿತ್ತ ಈ ಕೆಳಕಂಡಂತೆ ತ್ರಿಸದಸ್ಯ ಸಮಿತಿಗಳನ್ನು ನೇಮಿಸಲಾಗಿತ್ತು. ಅವುಗಳ ವರದಿಯನ್ವಯ ಕಾಲೇಜುಗಳನ್ನು ಪ್ರಾರಂಭಿಸಲು ಅನುಮತಿ ನೀಡಲಾಗಿದೆ.

| ಕ್ರ ಸಂ. | ಸಂಸ್ಥೆಗಳ ವಿಳಾಸ | ಅನುಮತಿ ನೀಡಿರುವ ಶಾಸ್ತ್ರಭಾಗಗಳು | ಸಮಿತಿ ಸದಸ್ಯರ ಹೆಸರು ಮತ್ತು ಭೇಟಿ ದಿನಾಂಕ |
|---|---|---|---|
| 01 | **ಜೆ.ಎಸ್.ಎಸ್. ಮಹಾವಿದ್ಯಾಪೀಠ**<br>ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ರಾಮಾನುಜ ರಸ್ತೆ ಮೈಸೂರು–570004. | 1. ಅಲಂಕಾರಶಾಸ್ತ್ರ ಬಿ.ಎ. ವಿದ್ವನ್ಮಧ್ಯಮಾ– I<br>2. ಜ್ಯೋತಿಷ್ಯಶಾಸ್ತ್ರ ಬಿ.ಎ. ವಿದ್ವನ್ಮಧ್ಯಮಾ– I<br>3. ಶಕ್ತಿವಿಶಿಷ್ಟಾದ್ವೈತ ವೇದಾಂತ ಬಿ.ಎ. ವಿದ್ವನ್ಮಧ್ಯಮಾ–I | **30.05.2013**<br>ವಿದ್ವಾನ್ ಶ್ರೀನಿವಾಸಮೂರ್ತಿ<br>ವಿದ್ವಾನ್ ಎನ್.ಆರ್. ಮುರಳೀಧರ್<br>ವಿದ್ವಾನ್ ಪಿ.ಆರ್. ಪಾಗೋಜಿ |
| 02 | **ಶ್ರೀ ಸಿದ್ಧೇಶ್ವರ ವಿದ್ಯಾಸಂಸ್ಥೆ, ಸಿದ್ದಾಪುರ**<br>ಬಂಡಿಮೋಟ್, ಬಳ್ಳಾರಿ–583101 | 1. ಅಲಂಕಾರಶಾಸ್ತ್ರ ಬಿ.ಎ. ವಿದ್ವನ್ಮಧ್ಯಮಾ– I<br>2. ಶಕ್ತಿವಿಶಿಷ್ಟಾದ್ವೈತ ವೇದಾಂತ ಬಿ.ಎ. ವಿದ್ವನ್ಮಧ್ಯಮಾ–I | **04.06.2013**<br>ವಿದ್ವಾನ್ ಜಿ.ಎಲ್. ಭಟ್ಟ<br>ವಿದ್ವಾನ್ ಡಿ.ಎಸ್. ಚಂದ್ರಶೇಖರಯ್ಯ<br>ವಿದ್ವಾನ್ ಎಂ. ಶಿವಮೂರ್ತಿ |

2013–14ನೇ ಸಾಲಿನಲ್ಲಿ ಹೊಸದಾಗಿ ಸಂಸ್ಕೃತ ಕಾಲೇಜುಗಳನ್ನು ಆರಂಭಿಸಲು ಮೇಲಿನ ಸಂಸ್ಥೆಗಳಿಗೆ ಘಟನೋತ್ತರ ಅನುಮತಿ ನೀಡಲು ಅನುಮೋದನೆಗಾಗಿ ಮಂಡಿಸಿದೆ.

ನಿರ್ಣಯ: **ಸಭೆಯು ಮೇಲಿನ ಸಂಸ್ಥೆಗಳು ೨೦೧೩–೧೪ನೇ ಸಾಲಿನಲ್ಲಿ ಹೊಸದಾಗಿ ಸಂಸ್ಕೃತ ಕಾಲೇಜುಗಳನ್ನು ಆರಂಭಿಸುವುದಕ್ಕೆ ಘಟನೋತ್ತರ ಅನುಮೋದನೆಯನ್ನು ನೀಡಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು